**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**

**<u>ಸಿ.ಸಿ. 39/2017</u>**

**<u>ಪಿರ್ಯಾದುದಾರರು</u> ಃ** ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

**-ವಿರುದ್ದ-**

**<u>ಆರೋಪಿ/ತರು</u> ಃ** ಚಿದಾನಂದ ಮತ್ತು ಇನ್ನೊಬ್ಬರು

**<u>-ಃದೋಷಾರೋಪಣೆಃ-</u>**

**ಶ್ರೀ ನಂಜೇಗೌಡ ಎಂ.ಸಿ.,** ಬಿ.ಎ.ಎಲ್., ಎಲ್.ಎಲ್.ಎಂ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ಚಿದಾನಂದ ಬಿನ್ ಶಿವಲಿಂಗಯ್ಯ, 34 ವರ್ಷ, ತರೀಕೆರೆ ಸಮನ್ವಯ ಆರೋಗ್ಯ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸೊಸೈಟಿಯ ಕಾರ್ಯದರ್ಶಿ, ವಾಸಃ ಹಳೇಪಾಳ್ಯ ಗ್ರಾಮ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.
2. ಎ.ಎಂ. ಮೋಹನ ಬಿನ್ ಮಹಾಲಿಂಗಯ್ಯ, 31 ವರ್ಷ, ತರೀಕೆರೆ ಸಮನ್ವಯ ಆರೋಗ್ಯ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸೊಸೈಟಿಯಲ್ಲಿ ಖಾಜಾಂಚಿ , ವಾಸಃ ಆಲದಹಳ್ಳಿ ಗ್ರಾಮ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕಃ08.11.2001 ರಂದು 1 ನೇ ಆರೋಪಿ ಚಿದಾನಂದರವರಾದ ನೀವು 2 ನೇ ಅರೋಪಿ ಮೋಹನರವರಾದ ನೀವುಗಳು ಸೇರಿಕೊಂಡು ಭಾರತೀಯ ಜೀವ ನಿಮಾ ನಿಗಮ ಉಡುಪಿ ವಿಭಾಗದ ಮೈಕ್ರೋ ಇನ್ಸೂರೆನ್ಸ್ ಜೀವನ್ ಮಧುರ ಮತ್ತು ಜೀವನ್ ಮಂಗಳ ಪಾಲಿಸಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಮಾರಾಟ ಮಾಡಲು ಡಾಃಶ್ರೀಧರ್ ಎನ್ನುವವರನ್ನು ಅಧ್ಯಕ್ಷರಂತೆ, ಶ್ರೀ ಲಕ್ಷ್ಮೀಕುಮಾರ್ ರವನ್ನು ಉಪಾಧ್ಯಕ್ಷರಂತೆ, ಶಶಿಧರ್ ರವರನ್ನು ಜಂಟಿ ಕಾರ್ಯದರ್ಶಿಯಂತೆ ಹಾಗೂ 1 ನೇ ಆರೋಪಿಯಾದ ನಿಮ್ಮನ್ನು ಕಾರ್ಯದರ್ಶಿಯಂತೆ ಮತ್ತು 2 ನೇ ಆರೋಪಿಯಾದ ನಿಮ್ಮನ್ನು ಖಜಾಂಚಿಯಂತೆ, ಕೃಷ್ಣಮೂರ್ತಿ, ನಾಗರಾಜು, ಶ್ರೀಮತಿ, ಪ್ರಭಾವಿಶ್ವನಾಥ್ ಹಾಗೂ ಜಿ.ಕೆ. ನಾಗರಾಜು ರವರನ್ನು ನಿರ್ದೇಶಕರಂತೆ ದಾಖಲೆಗಳನ್ನು ಸೃಷ್ಠಿಸಿಕೊಂಡು, ಸಾಕ್ಷಿ-32 ರಿಂದ ಸಾಕ್ಷಿ-38 ರವರ ಗಮನಕ್ಕೆ ಬಾರದ ನಡವಳಿಗಳನ್ನು ತಮ್ಮ ಇಷ್ಟಾನುಸಾರ ಸೃಷ್ಠಿ ಮಾಡಿಕೊಂಡು ಸೂಕ್ಷ್ಮ ಪ್ರತಿನಿಧಿಗಳನ್ನು ಮತ್ತು ಫೀಲ್ಡ್ ಆಫೀಸರ್ ಗಳನ್ನು ಹಾಗೂ ವೃಂದ ನೌಕರರಗಳನ್ನು ನೇಮಿಸಿಕೊಂಡು ಸಮನ್ವಯ ಆರೋಗ್ಯ ಮತ್ತು ಗ್ರಾಮೀಣಾಭಿವೃದ್ಧಿ ಸೊಸೈಟಿ ಎಂಬ

ಹೆಸರಿನ ಸಂಸ್ಥೆಯನ್ನು ನೋಂದಾಯಿಸಿ, ಆ ಮೂಲಕ **ಭಾರತೀಯ ದಂಡ ಸಂಹಿತೆಯ ಕಲಂ.465, 468 ಮತ್ತು 469 ಸಹಕಲಂ 34** ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮುಂದುವರೆದು, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಮೇಲೆ ಹೇಳಿದ ಸೃಷ್ಠಿ ಮಾಡಿದ ದಾಖಲೆಗಳನ್ನು ನೈಜ ದಾಖಲೆಗಳೆಂದು ತುಮಕೂರು ಜಿಲ್ಲಾ ರಿಜಿಸ್ಟ್ರರ್ ಕಛೇರಿಯಲ್ಲಿ ಬಳಸಿ ಸಮನ್ವಯ ಆರೋಗ್ಯ ಮತ್ತು ಗ್ರಾಮೀಣಾಭಿವೃದ್ದಿ ಸೊಸೈಟಿ ಎಂಬ ಸಂಸ್ಥೆಯನ್ನು ನೋಂದಾಯಿಸಿ ಆ ಮೂಲಕ ಆ ಮೂಲಕ **ಭಾರತೀಯ ದಂಡ ಸಂಹಿತೆಯ ಕಲಂ.471 ಸಹಕಲಂ 34** ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮುಂದುವರೆದು, 1 ಮತ್ತು 2 ನೇ ಆರೋಪಿತರಾದ ನೀವು ಸೂಕ್ಷ್ಮ ಪ್ರತಿನಿಧಿಗಳ ಮೂಲಕ ಜೀವನ್ ಮಧುರ ಮತ್ತು ಜೀವನ್ ಮಂಗಳ ಪಾಲಿಸಿಗಳನ್ನು ಮಾಡಿಸಿ ಹಣವನ್ನು ವಸೂಲಿ ಮಾಡಿ ಮೋಸ ಮಾಡುವ ಉದ್ದೇಶದಿಂದ ಆಡಳಿತಾ ಮಂಡಳಿಯವರ, ಸಂಸ್ಥೆಯ ವೃಂದ ನೌಕರರ ಸೂಕ್ಷ್ಮ ಪ್ರತಿನಿಧಿಗಳ ಹಾಗೂ ಫೀಲ್ಡ್ ಆಫೀಸರ್ ಗಳಿಗೆ ಪರಿಚಯ ಮಾಡಿಸದೆ ಹಾಗೂ ಸಂಸ್ಥೆಗೆ ಸಂಬಂಧಿಸಿದ ಯಾವುದೇ ಕಾರ್ಯ ಕಲಾಪಗಳನ್ನು ಮಾಡದೆ ಪಾಲಿಸಿದಾರರು ನೀಡಿದ ಹಣವನ್ನು ಮತ್ತು ಸೂಕ್ಷ್ಮ ಪ್ರತಿನಿಧಿಗಳಾದ ಸಾಕ್ಷಿ 5, 6, 7, 8, 11 ಮತ್ತು 12 ರವರು ನೀಡಿದ ಪಾಲಿಸಿಗಳ ಹಣವನ್ನು ಪಾಲಿಸಿದಾರರ ಖಾತೆಗೆ ಜಮಾ ಮಾಡದೆ 2009 ಮತ್ತು 2010 ನೇ ಸಾಲಿನಲ್ಲಿ ಒಟ್ಟು 2,44,737 ರೂ.ಗಳನ್ನು ಹಣವನ್ನು ದುರುಪಯೋಗ ಮಾಡಿಕೊಂಡು ಆ ಮೂಲಕ ಆ ಮೂಲಕ **ಭಾರತೀಯ ದಂಡ ಸಂಹಿತೆಯ ಕಲಂ.406 ಮತ್ತು 408 ಸಹಕಲಂ 34** ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮುಂದುವರೆದು, 1 ಮತ್ತು 2 ನೇ ಆರೋಪಿತರಾದ ನೀವು ಮೇಲೆ ಹೇಳಿದಂತೆ ಸೂಕ್ಷ್ಮ ಪ್ರತಿನಿಧಿಗಳ ಮೂಲಕ ಜೀವನ್ ಮಧುರ ಮತ್ತು ಜೀವನ್ ಮಂಗಳ ಪಾಲಿಸಿಗಳ ಹಣವನ್ನು ವಸೂಲಿ ಮಾಡಿ ಮೋಸ ಮಾಡುವ ಉದ್ದೇಶದಿಂದ ವಿಮಾ ಪಾಲಿಸಿದಾರರ ಖಾತೆಗೆ ಹಣವನ್ನು ಜಮಾ ಮಾಡದೆ ವಿಮಾ ಪಾಲಿಸಿದಾರರಿಗೆ ಮತ್ತು ಭಾರತೀಯ ಜೀವ ವಿಮಾ ನಿಗಮಕ್ಕೆ ಮೋಸ ಮಾಡಿ ಆ ಮೂಲಕ **ಭಾರತೀಯ ದಂಡ ಸಂಹಿತೆಯ ಕಲಂ.420 ಸಹಕಲಂ 34** ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ31-10-2019

Sd/-

**(ನಂಜೇಗೌಡ ಎಂ.ಸಿ.)**

ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರದನ್ಯಾದಂ,ರವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ. 39/2017**

ಆರೋಪಿ ಸಂಖ್ಯೆ : 1

| | | |
|---|---|---|
| ಆಪಾದಿತರ ಹೆಸರು | : | ಚಿದಾನಂದ |
| ತಂದೆ ಹೆಸರು | : | ಶಿವಲಿಂಗಯ್ಯ |
| ವಯಸ್ಸು | : | 34 |
| ಉದ್ಯೋಗ | : | ಸಮನ್ವಯ ಆರೋಗ್ಯ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸೊಸೈಟಿಯ ಕಾರ್ಯದರ್ಶಿ |
| ವಾಸಸ್ಥಳ | : | ಹಳೇಪಾಳ್ಯ ಗ್ರಾಮ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ. |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ಅಡಿ ಪ್ರಕಾರ ಆರೋಪಿಯ ಹೇಳಿಕೆಃ**

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರದನ್ಯಾದಂ,ರವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ. 39/2017**

ಆರೋಪಿ ಸಂಖ್ಯೆ : 2

| | | |
|---|---|---|
| ಆಪಾದಿತರ ಹೆಸರು | : | ಎ.ಎಂ. ಮೋಹನ |
| ತಂದೆ ಹೆಸರು | : | ಮಹಾಲಿಂಗಯ್ಯ |
| ವಯಸ್ಸು | : | 31 |
| ಉದ್ಯೋಗ | : | ತರೀಕೆರೆ ಸಮನ್ವಯ ಆರೋಗ್ಯ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸೊಸೈಟಿಯಲ್ಲಿ ಖಾಜಾಂಚಿ |
| ವಾಸಸ್ಥಳ | : | ಆಲದಹಳ್ಳಿ ಗ್ರಾಮ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ. |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ಅಡಿ ಪ್ರಕಾರ ಆರೋಪಿಯ ಹೇಳಿಕೆಃ**

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.